**<u>ದಿನಾಂಕಃ 09.06.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು.</u>**

**<u>ಮುಖ್ಯವಿಚಾರಣೆಃ ಶ್ರೀ.ಬಿ.ಎಸ್.ದೇವರಾಜು ವಕೀಲರಿಂದ ಅರ್ಜಿದಾರರ ಪರವಾಗಿ.</u>**

ನನ್ನ ಮುಖ್ಯವಿಚಾರಣೆಯಾಗಿ ಹಾಜರುಪಡಿಸಿರುವ ಪ್ರಮಾಣಪತ್ರದಲ್ಲಿ ಬರೆಯಲಾಗಿರುವ ಅಂಶಗಳು ನನಗೆ ತಿಳಿದಿದ್ದು ಸತ್ಯಾಂಶಗಳಿಂದ ಕೂಡಿರುತ್ತದೆ. ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸಿದ್ದು ಅದರಲ್ಲಿ ಪ್ರಥಮ ವರ್ತಮಾನ ವರದಿಯ ದೃಢೀಕೃತ ನಕಲು ನಿಪಿಃ1 ಎಂದು, ದೂರಿನ ದೃಢೀಕೃತ ನಕಲು ನಿಪಿಃ2 ಎಂದು, ಸ್ಥಳ ಮಹಜರಿನ/ಪಂಚನಾಮೆಯ ದೃಢೀಕೃತ ನಕಲು ನಿಪಿಃ3 ಎಂದು, ಅಪರಾಧ ವಿವರ ನಮೂನೆಯನ್ನು ನಿ.ಪಿ.4 ಎಂದು,

ವಾಹನ ಅಪಘಾತದ ವರದಿಯ ದೃಢೀಕೃತ ನಕಲು ನಿಪಿಃ5 ಎಂದು, ಗಾಯದ ಪ್ರಮಾಣ ಪತ್ರದ ದೃಢೀಕೃತ ನಕಲು ನಿಪಿಃ 6 ಎಂದು, ಅಂತಿಮ ವರದಿಯ ದೃಢೀಕೃತ ನಕಲು ನಿಪಿಃ 7 ಎಂದು, ಡಿಸ್‌ಚಾರ್ಜ್ ಸಮ್ಮರಿ ನಿಪಿಃ8 ಎಂದು, ಆಧಾರ್ ಕಾರ್ಡಿನ ನೋಟರೀಕೃತ ಪ್ರತಿಯನ್ನು ನಿಪಿಃ9 ಎಂದು(ಮೂಲ ದಾಖಲೆಯೊಂದಿಗೆ ತಾಳೆ ಮಾಡಿ ಪರಿಶೀಲಿಸಿ ಹಿಂದಿರುಗಿಸಲಾಯಿತು), ರೂ.1,05,200/- ಗಳ ಮುಂಗಡ ಹಣ ಪಾವತಿಸಿದ 3 ಬಿಲ್ಲುಗಳು ಒಟ್ಟಾಗಿ ನಿ.ಪಿ.10 ಎಂದು, 41 ಮೆಡಿಕಲ್ ಬಿಲ್ಲುಗಳನ್ನು ಒಟ್ಟಾಗಿ ನಿಪಿಃ11 ಎಂದು, 29 ಔಷಧಿ ಚೀಟಿಗಳನ್ನು ಒಟ್ಟಾಗಿ ನಿಪಿಃ12 ಎಂದು, 4 ಕ್ಷ ಕಿರಣ ಚಿತ್ರಣಗಳನ್ನು ಒಟ್ಟಾಗಿ ನಿ.ಪಿ.13 ಎಂದು, ಟೈಲರಿಂಗ್ ಮಾಡಲು ನೀಡಿದ ಲೈಸನ್ಸ್ ನ ನೋಟರೀಕೃತ ಪ್ರತಿ ನಿ.ಪಿ.14 ಎಂದು (ಮೂಲ ದಾಖಲೆಯೊಂದಿಗೆ ತಾಳೆ ಮಾಡಿ ಪರಿಶೀಲಿಸಿ ಹಿಂದಿರುಗಿಸಲಾಯಿತು),

ಆದ್ದರಿಂದ ಅರ್ಜಿಯಲ್ಲಿ ಕೇಳಿರುವಂತೆ ಆದೇಶ ಮಾಡಬೇಕಾಗಿ ಕೋರುತ್ತೇನೆ.

**<u>ಪಾಟೀ ಸವಾಲುಃ ಶ್ರೀ.ಕೆ. ಹೆಚ್. ದಿನೇಶ. ವಕೀಲರಿಂದ 1 ನೇ ಎದುರುದಾರರ ಪರವಾಗಿ.</u>**

ನನ್ನ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ವಿಳಾಸದಲ್ಲೇ ನಾನು ಹುಟ್ಟಿದಾಗಿನಿಂದಲೂ ವಾಸವಿದ್ದೇನೆ. ನಾನು 10 ನೇ ತರಗತಿವರೆಗೆ ಓದಿದ್ದು, ಅನುತ್ತೀರ್ಣನಾಗಿದ್ದೇನೆ. ಅದರ ಅಂಕಪಟ್ಟಿ ಇದೆ. ನನಗೆ 60 ಕ್ಕೂ ಹೆಚ್ಚು ವಯಸ್ಸು ಆಗಿರುವ ಕಾರಣ ನಾನು ಸದರಿ ಅಂಕಪಟ್ಟಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಆಧಾರ್ ಕಾರ್ಡಿನಲ್ಲಿ ನಾನು ಹೇಳಿದ

ಪ್ರಕಾರ ನಮೂದು ಮಾಡುತ್ತಾರೆ ಎಂದರೆ ಸರಿ. ನಾನು ಸುಳ್ಳು ಜನ್ಮ ದಿನಾಂಕವನ್ನು ಆಧಾರ್ ಕಾರ್ಡ್ ನಲ್ಲಿ ತಿಳಿಸಿದ್ದೇನೆ ಎಂದರೆ ಸರಿಯಲ್ಲ. ಅಪಘಾತವು ನನ್ನ ಮನೆಯ ಮುಂದೆ ಆಗಿದೆ ಎಂದರೆ ಸರಿ. ಅಪಘಾತವಾದ ರಸ್ತೆಯ ಅಗಲ ಸುಮಾರು 15 ಅಡಿ ಇರಬಹುದು. ನಮ್ಮ ಅಕ್ಕ ಪಕ್ಕ ಮನೆಗಳು ಇದೆ. ನಮ್ಮ ಮನೆಯ ಬಳಿ ಬೀದಿ ದೀಪಗಳು ಇದೆ. ಅಪಘಾತದ ಸಮಯದಲ್ಲಿ ರಸ್ತೆಯಲ್ಲಿ ಒಂದಿಬ್ಬರು ಇರಬಹುದು.

ಅಪಘಾತ ಆದ 3 ದಿನದ ನಂತರ ದೂರನ್ನು ನನ್ನ ಮಗ ನೀಡಿದ್ದಾನೆ ಎಂದರೆ ಸರಿ. ಈ ಅಪಘಾತದಿಂದ ಅಪಘಾತ ಪಡಿಸಿದವರಿಗೂ ಸಹ ತೊಂದರೆ ಆಗಿರುತ್ತದೆ. ಅಪಘಾತದ ನಂತರ ನನಗೆ ಎಚ್ಚರ ತಪ್ಪಿದ್ದು, ಆಸ್ಪತ್ರೆಗೆ ಹೋದ ನಂತರ ಎಚ್ಚರ ಆಗಿರುತ್ತದೆ. ಅಪಘಾತದ ಸಮಯದಲ್ಲಿ ನಾನು ಮತ್ತು ನನ್ನ ಮಗ ಇದ್ದೆವು. ಪೋಲೀಸರು ಆಸ್ಪತ್ರೆಗೆ ಬಂದಿದ್ದರು. ಪೋಲೀಸರು ನನ್ನ ಹೇಳಿಕೆ ಪಡೆದಿದ್ದಾರೆ ಅದರ ಪ್ರತಿ ಹಾಜರುಪಡಿಸಿಲ್ಲ. ನಾನು ಮನೆಯ ಬಳಿ ಜಾರಿ ಬಿದ್ದ ಕಾರಣ ನನಗೆ ತೊಂದರೆ ಆಗಿದ್ದು ವಾಹನ ಅಪಘಾತದಿಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ನಾನು ವಾಹನ ಮಾಲೀಕರ ಜೊತೆ ಶಾಮೀಲಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಾನೇ ಖುದ್ದು ಮೊದಲ ಆಸ್ಪತ್ರೆಯಿಂದ ಬಿಡಗಡೆ ಹೊಂದಿದ್ದೇನೆ ಎಂದರೆ ಬೇರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಮೊದಲ ಆಸ್ಪತ್ರೆಯವರೇ ತಿಳಿಸಿದ ಕಾರಣದಿಂದ ನಾನು ಬಿಡುಗಡೆ ಮಾಡಿಕೊಂಡಿದ್ದೇನೆ. ಇದರ ಬಗ್ಗೆ ಲಿಖಿತವಾಗಿ ನನಗೆ ದಾಖಲೆ ನೀಡಿಲ್ಲ.

ಬೇರೆ ಆಸ್ಪತ್ರೆಯಲ್ಲಿ ಈ ಅಪಘಾತದಿಂದ ಆದ ತೊಂದರೆಗಳಿಗೆ ನಾನು ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ಎನ್.ಆರ್.ಆರ್. ಆಸ್ಪತ್ರೆಯಲ್ಲಿ ಮುಂದಿನ ಚಿಕಿತ್ಸೆಯನ್ನು ಹೊರರೋಗಿಯಾಗಿ ಪಡೆದುಕೊಂಡಿದ್ದೇನೆ. ಅದರ ಕ್ಷ ಕಿರಣ ಚಿತ್ರಣಗಳನ್ನು ನಾನು ಹಾಜರುಪಡಿಸಿದ್ದೇನೆ. ನಾನು 2 ಲಕ್ಷ ರೂಗಳನ್ನು ಖರ್ಚು ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಪ್ರಮಾಣ ಪತ್ರದ 6ನೇ ಖಂಡಿಕೆಯಲ್ಲಿ ಹೇಳಿರುವ ಯಾವುದೇ ತೊಂದರೆಗಳು ನನಗೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಟೈಲರಿಂಗ್ ಮಾಡುತ್ತಿರಲಿಲ್ಲ ಮತ್ತು 30 ಸಾವಿರ ರೂ. ಗಳನ್ನು ದುಡಿಯುತ್ತಿರಲಿಲ್ಲ ಎಂದರೆ ಸರಿಯಲ್ಲ. ಮುಂದಿನ 2 ಶಸ್ತ್ರ ಚಿಕಿತ್ಸೆ

ಆಗಬೇಕಾಗಿದೆ ಎಂದು ತಿಳಿಸಿದ್ದು ಅದಕ್ಕೆ 2 ಲಕ್ಷ ರೂಗಳು ಅವಶ್ಯಕತೆ ಇದೆ ಎಂದು ತಿಳಿಸಿದ್ದು, ಅದರ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ.

ಅಪಘಾತದಲ್ಲಿ ಎದುರುದಾರರ ವಾಹನ ಭಾಗಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ರೀತಿಯ ತೊಂದರೆ ಇರುವುದಿಲ್ಲ ಮತ್ತು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿ, ಓದಿ ಹೇಳಿ ನಂತರ ಸಹಿ ಪಡೆಯಲಾಯಿತು).

ಓ ಹೇ ಕೇ ಸ ಇದೆ.

5 ನೇ ಅಪರ ನ್ಯಾಯಾಧೀಶರು,
ಲಘು ವ್ಯವಹಾರಗಳ ನ್ಯಾಯಾಲಯ,
24 ನೇ ಎಸಿಎಂಎಂ ಮತ್ತು ಸದಸ್ಯರು ಎಂಎಸಿಟಿ.